# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 07–02–2022 ರಂದು ಬೆಳಿಗ್ಗೆ 11.30 ಘಂಟೆಗೆ Ward ಸಮಿತಿ ಸಭೆಯನ್ನು ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು–560102, ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190–ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಸೈಯದ್ ಸಲಾಂ | ಸದಸ್ಯರು | 9035084140 |
| 4 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು | 9900388075 |
| 5 | ಶ್ರೀ ಚಂದ್ರರೆಡ್ಡಿ | ಸದಸ್ಯರು | 9900115285 |
| 6 | ಶ್ರೀ ಗೋಪಿನಾಥ್ | ಸದಸ್ಯರು | 9243111520 |
| 7 | ಡಾ॥ ಯೋಗೇಶ್ | ಪ್ರಾ.ಆ.ಕೇಂ (ವೈದ್ಯರು) | 9242832196 |
| | ಡಾ॥ ಮಾಧವಿ | ಪ್ರಾ.ಆ.ಕೇಂ (ವೈದ್ಯರು) | 9242832196 |
| 8 | ಶ್ರೀ ಎಂ ವೆಂಕಟೇಶ್ | ಎ.ಎಸ್.ಐ ಬಂಡೇಪಾಳ್ಯ ಪೋಲಿಸ್ ಠಾಣೆ | 9945576698 |
| 9 | ಶ್ರೀ ವಿಕ್ರಾಂತ್.ಕೆ | ಸಹಾಯಕ ಅಭಿಯಂತರರು ಎಸ್.ಡಬ್ಲ್ಯೂ.ಡಿ | 9742916593 |
| 10 | ಶ್ರೀ ಎಸ್.ಸುಧೀರ್ | ಹಿರಿಯ ಪಶುವೈದ್ಯಕೀಯ ಇನ್ಸ್‌ಪೆಕ್ಟರ್ | 9845226800 |
| 11 | ಶ್ರೀ ಹೆಚ್.ಆರ್. ಹರೀಶ್ | ಅರಣ್ಯ ವಲಯ ಅಧಿಕಾರಿ (ಪೊ.ವ.) | 9742612471 |
| 12 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು | 9844629911 |
| 13 | ಶ್ರೀ ಸತೀಶ್ ಕುಮಾರ್ | ಸಹಾಯಕ ಅಭಿಯಂತರರು, ಡಬ್ಲ್ಯೂ.ಡಬ್ಲ್ಯೂ.ಎಂ | 9611344533 |
| 14 | ಶ್ರೀ ರಮೇಶ್ ಡಿ | ಕಿರಿಯ ಅಭಿಯಂತರರು, ಬೀದಿ ದೀಪ | 9480688559 |
| 15 | ಶ್ರೀ ವಿಕಾಸ ಡಿ.ಎಸ್. | ಕಿರಿಯ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ | 91108239389 |
| 16 | ಶ್ರೀ ಪುಟ್ಟಸ್ವಾಮಿ | ಕಿರಿಯ ಅಭಿಯಂತರರು, ಬೆಸ್ಕಾಂ | 9448524996 |
| 17 | ಶ್ರೀ ಕೇಶವ ಮೂರ್ತಿ | ಕಿರಿಯ ಅಭಿಯಂತರರು, ಬೆಸ್ಕಾಂ | 7022751710 |
| 18 | ಶ್ರೀ ಹರ್ಷ ಎಸ್ | ಬಿಡಬ್ಲ್ಯೂ.ಎಸ್.ಎಸ್.ಬಿ | 9008296095 |
| 19 | ಶ್ರೀ ಹೊನ್ನುರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ಸಂ. 190) | 8073548204 |
| 20 | ಶ್ರೀ ಶಿವಕುಮಾರ್ ಎಲ್ | ಮಾರ್ಷಲ್ | 8073223596 |

(ಪು.ತಿ.ನೋ)

Scanned with

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಿದ್ದರು.

- **<u>ಆರೋಗ್ಯ ಇಲಾಖೆ (ಕೋವಿಡ್-19)</u>**
  1. ಡಾ॥ ಯೋಗೇಶ್ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಇಳಿಕೆಯಾಗಿದ್ದು, ತಿಂಗಳಲ್ಲಿ 30-40 ಸಕ್ರಿಯ ಪ್ರಕರಣಗಳು ಪತ್ತೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದ್ದರು.
  2. ದಿನಾಂಕ: 10.01.2022 ರಿಂದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ಕೋವಿಡ್-19 ಮುನ್ನೆಚ್ಚರಿಕೆ ಲಸಿಕಾ ಈಗಾಗಲೇ 2 ಡೋಸ್ ಲಸಿಕೆ ಪಡೆದ 09 ತಿಂಗಳ (39 ವಾರಗಳ) ಅರ್ಹರಿರುವ ಫಲಾನುಭವಿಗಳಿಗೆ ಲಸಿಕೆ ಈ ವಾರ್ಡ್‌ನಲ್ಲಿ ನೀಡಲಾಗುತ್ತಿರುವುದಾಗಿ ಡಾ॥ ಯೋಗೇಶ್ ರವರು ಸಭೆಗೆ ತಿಳಿಸಿದ್ದರು.
  3. ವಾರ್ಡ್ ಸಂಖ್ಯೆ: 190ರ ವಾರ್ಡ್ ವ್ಯಾಪ್ತಿಯಲ್ಲಿ 15-18 ವರ್ಷ ವಯಸ್ಸಿನ ಮಕ್ಕಳಿಗೆ ಲಸಿಕೆ ಅಭಿಯಾನವನ್ನು ಸರ್ಕಾರ ಪ್ರಾರಂಭಿಸಿದ್ದು, ಅದರಂತೆ ಈ ವಾರ್ಡ್‌ನಲ್ಲಿ ಮಕ್ಕಳಿಗೆ ಶಾಲೆ/ಕಾಲೇಜು ಮತ್ತು ಲಸಿಕೆ ಕೇಂದ್ರಗಳಲ್ಲಿ ಲಸಿಕೆ ಪಡೆಯುವ ಮಕ್ಕಳ ತಂದೆ/ತಾಯಿಯರ, ಪೋಷಕರ, ಶಾಲೆ ಶಿಕ್ಷಕರ, ಶಾಲೆ ಮುಖ್ಯೋಪಾದ್ಯಯರ ಮೊಬೈಲ್ ಸಂಖ್ಯೆಯನ್ನು ಬಳಸಿ ಲಸಿಕೆಯನ್ನು ಉಚಿತವಾಗಿ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ನಂಬರ್ ಬಳಸಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಾಣಿ ಮಾಡಲಾಗುತ್ತಿರುವುದಾಗಿ ಡಾ॥ ಯೋಗೇಶ್ ರವರು ಸಭೆಗೆ ತಿಳಿಸಿದ್ದರು.

- **<u>ಘನತ್ಯಾಜ್ಯ</u>**
  1. ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ಬಗ್ಗೆ ಸಭೆಯಲ್ಲಿ ಸದಸ್ಯರಾದ ಶ್ರೀ ಸೈಯದ್ ಸಲಾಂ, ಶ್ರೀ ಸುರೇಶ್ ರೆಡ್ಡಿ, ಶ್ರೀ ಚಂದ್ರ ರೆಡ್ಡಿ ಮತ್ತು ಇತರೆ ಸದಸ್ಯರುಗಳು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಶ್ರೀ ಹೊನ್ನುರು ಪಾಷ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ವ್ಯಾಪ್ತಿಯ ಮನೆ ಮನೆಗಳಿಗೆ ಕಸದ ಆಟೋಗಳು ಕಸ ಸಂಗ್ರಹಣೆ ಮಾಡಲಾಗುತ್ತಿದ್ದು, ರಸ್ತೆ ಬದಿಗಳಲ್ಲಿ ಕಸ ಸುರಿಯುವವರಿಗೆ ಹಾಗೂ ಕಸ ಸುರಿಯುವುದು ಕಂಡು ಬಂದದ್ದಲ್ಲಿ ಮಾರ್ಷಲ್ ರವರಿಂದ ದಂಡವನ್ನು ವಿಧಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದ್ದರು. ಈ ಬಗ್ಗೆ ಶ್ರೀ ಸೈಯದ್ ಸಲಾಂ ರವರು ಮಾತನಾಡುತ್ತಾ, ಖಾಲಿ ನಿವೇಶನಗಳಲ್ಲಿ ಕಸದ ರಾಶಿ ತುಂಬಿ ಕಸದ ಬ್ಲ್ಯಾಕ್ ಸ್ಪಾಟ್‌ಯಾಗಿ ಹಾಗೂ ಇಂತಹ ಖಾಲಿ ನಿವೇಶನಗಳಲ್ಲಿನ ಕಸವನ್ನು ಹಾಕದಂತೆ ನಿವೇಶನದ ಮಾಲೀಕರಿಗೆ ಎಚ್ಚರಿಸಿ ಸ್ವಚ್ಛತೆ ಕಾಪಾಡಲು ಸೂಚಿಸುವಂತೆ ಸಭೆಯ ಗಮನಕ್ಕೆ ತಂದರು. ಶ್ರೀ ಹೊನ್ನುರು ಪಾಷ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ವಹಿಸುವುದಾಗಿ ತಿಳಿಸಿದ್ದರು.
  2. ವಾರ್ಡ್ ವ್ಯಾಪ್ತಿಯಲ್ಲಿ ಪೌರಕಾರ್ಮಿಕರುಗಳಿಗೆ ತಿಂಗಳಲ್ಲಿ ಎಷ್ಟು ರಜೆಗಳು ನೀಡಲಾಗುತ್ತಿರುವ ಬಗ್ಗೆ ಶ್ರೀ ಸೈಯದ್ ಸಲಾಂ, ಶ್ರೀ ಸುರೇಶ್ ರೆಡ್ಡಿ, ಶ್ರೀ ಚಂದ್ರ ರೆಡ್ಡಿ ಮತ್ತು ಇತರೆ ಸದಸ್ಯರುಗಳು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಶ್ರೀ ವಿನೋದ್ ಜಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಶ್ರೀ ಹೊನ್ನುರು ಪಾಷ ಕಿರಿಯ ಆರೋಗ್ಯ ಪರಿವೀಕ್ಷಕರು ಒಬ್ಬ ಪೌರಕಾರ್ಮಿಕರಿಗೆ ತಿಂಗಳಲ್ಲಿ 4 ದಿನಗಳು ಹಾಗೂ ಭಾನುವಾರ ಅರ್ಧ ದಿನ ರಜೆ ಇರುವುದಾಗಿ ಸಭೆಗೆ ತಿಳಿಸಿದ್ದರು.
  3. ವಾರ್ಡ್ ವ್ಯಾಪ್ತಿಯಲ್ಲಿ ಪೌರಕಾರ್ಮಿಕರುಗಳಿಗೆ ವೇತನವನ್ನು ಯಾವ ರೀತಿಯಲ್ಲಿ ಪಾವತಿಸಲಾಗುತ್ತಿದೆ ಹಾಗೂ ಪೌರಕಾರ್ಮಿಕರು ಗೈರು ಹಾಜರಾದ್ದಲ್ಲಿ ವೇತನದಲ್ಲಿ ಕಡಿತಗೊಳಿಸುವಿಕೆ ವಿವರವನ್ನು ಸಭೆಯಲ್ಲಿ ಶ್ರೀ ಸೈಯದ್ ಸಲಾಂ, ಶ್ರೀ ಸುರೇಶ್ ರೆಡ್ಡಿ, ಶ್ರೀ ಚಂದ್ರ ರೆಡ್ಡಿ ಮತ್ತು ಇತರೆ ಸದಸ್ಯರುಗಳು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಶ್ರೀ ವಿನೋದ್ ಜಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಶ್ರೀ ಹೊನ್ನುರು ಪಾಷ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಪೌರಕಾರ್ಮಿಕರುಗಳಿಗೆ ಹಾಜರಾತಿಯನ್ನು ಬಯೋಮೆಟ್ರಿಕ್ ಥಂಬ್ ಇಂಪ್ರೆಷನ್ ಮೂಲಕ ಪಡೆದುಕೊಳ್ಳಲಾಗುತ್ತಿದ್ದು, ವೇತನಕ್ಕಾಗಿ ವಲಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರಿಂದ ಅನುಮೋದನೆ ಪಡೆದುಕೊಂಡು ಬಿಬಿಎಂಪಿ ಹೆಚ್.ಆರ್.ಎಂ.ಎಸ್. ನಿಂದ ನೇರವಾಗಿ ಪೌರಕಾರ್ಮಿಕರುಗಳ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿರುವುದಾಗಿ ಸಭೆಗೆ ತಿಳಿಸಿದ್ದರು.

(3...)

Scanned with

- **<u>ಪಶುಸಂಗೋಪನೆ</u>**

1. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವಂತೆ, ಬೀದಿ ನಾಯಿಗಳನ್ನು ಹಿಡಿದುಕೊಂಡು ಹೋಗಿ ಸಂತಾಹರಣ ಶಸ್ತ್ರ ಚಿಕಿತ್ಸೆ ಆದ ನಂತರ ಅದೇ ಸ್ಥಳದಲ್ಲಿ ಬಿಡಲಾಗುತ್ತಿದ್ದು, ಇದರಿಂದ ಸಂತಾಹರಣ ಶಸ್ತ್ರ ಚಿಕಿತ್ಸೆಯಾದ ಬೀದಿ ನಾಯಿಗಳು ಹಾಗೂ ಕಚ್ಚುವ ನಾಯಿಗಳನ್ನು ಪತ್ತೆ ಮಾಡಲು ಕಷ್ಟವಾಗುತ್ತಿರುವುದರಿಂದ ಕರ್ನಾಟಕ ಸರ್ಕಾರದ (PETA) ಸಮಿತಿಯವರು ಬೇರೆ ಕಡೆ ಬೀದಿ ನಾಯಿಗಳಿಗೆ ಸಾಕಲು ಹಾಗೂ ಆರೈಕೆ ಮಾಡಲು ಪುನರ್ವಸತಿ ಕೇಂದ್ರ ಸ್ಥಾಪಿಸಿದ್ದು, ಈ ಮಾದರಿಯಲ್ಲಿ ಮುಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ಕೂಡಸ ಸರ್ಕಾರದ ಜಾಗವನ್ನು ಗುರುತಿಸಿ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸುವಂತೆ ಶ್ರೀ ಸೈಯದ್ ಸಲಾಂ, ಶ್ರೀ ಸುರೇಶ್ ರೆಡ್ಡಿ, ಶ್ರೀ ಚಂದ್ರ ರೆಡ್ಡಿ ಮತ್ತು ಇತರೆ ಸದಸ್ಯರುಗಳು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಸುಧೀರ್ ಹಿರಿಯ ಪಶುವೈದ್ಯಕೀಯ ಇನ್ಸ್‌ಪೆಕ್ಟರ್ ರವರು ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಉಪವಿಭಾಗ ರವರೊಂದಿಗೆ ಜಾಗವನ್ನು ಪರಿಶೀಲಿಸಲು ಕ್ರಮ ಕೈಗೊಳ್ಳಲಾಗುವುದೆಂದು ಹಾಗೂ ಸದಸ್ಯರುಗಳು ಸಹಕಾರ ನೀಡಬೇಕೆಂದು ಸಭೆಯಲ್ಲಿ ತಿಳಿಸಿದ್ದರು.
2. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವಂತೆ ಹಂದಿಗಳ ಸಾಗಣಿಕೆ ಮತ್ತು ಅದನ್ನು ಹಿಡಿಯಲು ಸಂಬಂಧಪಟ್ಟ ಅಧಿಕಾರಿಗಳು ವಿಫಲವಾಗಿದ್ದು, ಸದರಿ ಹಂದಿಗಳು ಗುತ್ತಿಗೆದಾರರು/ ಮಾಲೀಕರುಗಳು ಹಿಡಿಯುವರೆಗೂ ವಾರ್ಡ್ ಪ್ರದೇಶಗಳಲ್ಲಿ ಅಲೆದಾಡುತ್ತಿರುವುದಾಗಿ ಇದಕ್ಕೆ ಶಾಂತ್ರಿಕವಾಗಿ ಖಾಯಂ ಹಂದಿಗಳ ಸಾಗಣಿಕೆ ಬಗ್ಗೆ ಪರಿಹಾರ ಮಾಡಿಸುವಂತೆ ಶ್ರೀ ಸೈಯದ್ ಸಲಾಂ, ಶ್ರೀ ಗೋಪಿನಾಥ, ಶ್ರೀ ಚಂದ್ರ ರೆಡ್ಡಿ, ಶ್ರೀ ಸುರೇಶ್ ರೆಡ್ಡಿ ರವರುಗಳು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರಿಗೂ ಸಹ ಕಡತವನ್ನು ಸಲ್ಲಿಸಲಾಗಿದ್ದು, ಸದರಿ ಅಧಿಕಾರಿ ರವರಿಂದ ಅಭಿಪ್ರಾಯ ಪಡೆದುಕೊಂಡು ಕ್ರಮ ವಹಿಸುವುದಾಗಿ ಶ್ರೀ ಸುಧೀರ್ ಹಿರಿಯ ಪಶುವೈದ್ಯಕೀಯ ಇನ್ಸ್‌ಪೆಕ್ಟರ್ ರವರು ಸಭೆಯಲ್ಲಿ ತಿಳಿಸಿದ್ದರು.

- **<u>ಬೀದಿ ದೀಪ</u>**

1. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವಂತೆ, ಇಂದಿನ ಸಭೆಯಲ್ಲಿ ಟೈಮರ್‌ಗಳು ಮತ್ತು ಬೀದಿ ದೀಪಗಳ ನಿರ್ವಹಣೆ ಬಗ್ಗೆ ಸದಸ್ಯರುಗಳಾದ ಶ್ರೀ ಸೈಯದ್ ಸಲಾಂ, ಶ್ರೀ ಗೋಪಿನಾಥ, ಶ್ರೀ ಚಂದ್ರ ರೆಡ್ಡಿ, ಶ್ರೀ ಸುರೇಶ್ ರೆಡ್ಡಿ ರವರುಗಳು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಶ್ರೀ ರಮೇಶ್ ಡಿ ಕಿರಿಯ ಅಭಿಯಂತರರು, ಬೀದಿ ದೀಪ ರವರು ಟೈಮರ್‌ಗಳನ್ನು ಅಳವಡಿಸಲಾಗುತ್ತಿದ್ದು ಮತ್ತು ಹೊಸದಾಗಿ ಬೀದಿ ದೀಪಗಳನ್ನು 1 ತಿಂಗಳೊಳಗಾಗಿ ಅಳವಡಿಸಲಾಗವುದೆಂದು ಸಭೆಯಲ್ಲಿ ತಿಳಿಸಿದ್ದರು.

- **<u>ತೋಟಗಾರಿಕೆ ಇಲಾಖೆ</u>**

1. ಇಂದಿನ ಸಭೆಗೆ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರಾಗಲಿ ಅಥವ ಅವರ ಪರವಾಗಿ ಸಿಬ್ಬಂದಿ ಯವರಾಗಲೀ ಸಭೆಗೆ ಗೈರುಹಾಜರಾಗಿದ್ದು, ಎಲ್ಲಾ ಸದಸ್ಯರು ಆಕ್ಷೇಪಿಸುತ್ತಾ, ನೋಡಲ್ ಅಧಿಕಾರಿ/ಅಧ್ಯಕ್ಷರು ರವರು ಕಾರಣ ಕೇಳಿ ನೋಟೀಸ್ ನೀಡುವಂತೆ ಕಾರ್ಯದರ್ಶಿ ರವರಿಗೆ ಸೂಚಿಸಿದ್ದರು. ಐ.ಟಿ.ಐ ಬಡಾವಣೆಯ ಕುವೆಂಪು ಉದ್ಯಾನವನದಲ್ಲಿ ವಾಸವಾಗಿರುವ ಭದ್ರತಾ ಸಿಬ್ಬಂದಿ ರವರ ಕೊಠಡಿಯಲ್ಲಿ ಮೂಲಭೂತ ಸೌಕರ್ಯಗಳು ಕಲ್ಪಿಸಿರುವುದಿಲ್ಲವೆಂದು ಹಾಗೂ ಉದ್ಯಾನವನದ ಮುಖ್ಯ ದ್ವಾರದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ವೇಳಾ ಪಟ್ಟಿಯನ್ನು ಅಳವಡಿಸುವಂತೆ ಶ್ರೀ ಗೋಪಿನಾಥ ಸದಸ್ಯರು ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದರು.

(4...)

Scanned with

- **<u>ಕಾಮಗಾರಿ</u>**

1. ವಾರ್ಡ್ ವ್ಯಾಪ್ತಿಯ ಉಜ್ವಲ ಫ್ಯಾಕ್ಟರಿ ಮತ್ತು ಕೂಡ್ಲು ಗೇಟ್ ಅಪಾರ್ಟ್‌ಮೆಂಟ್ ಹತ್ತಿರ, ನಾಮಫಲಕ ಇಲ್ಲದೆ ಇರುವುದರಿಂದ ನಾಮಫಲಕವನ್ನು ಅಳವಡಿಸಲು ಶ್ರೀ ಚಂದ್ರ ರೆಡ್ಡಿ ಮತ್ತು ಇತರೆ ಸದಸ್ಯರುಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಹಾಯಕ ಅಭಿಯಂತರರು ಕ್ರಿಯಾಯೋಜನೆಯಲ್ಲಿ ಸೇರಿಕೊಂಡು, ಅನುದಾನ ಬಿಡುಗಡೆಯಾದ ನಂತರ ಕ್ರಮ ವಹಿಸಲಾಗುವುದು ಎಂದು ಶಬೆಗೆ ತಿಳಿಸಿದರು.

2. ವಾರ್ಡ್ ವ್ಯಾಪ್ತಿಯ ಸರ್ವೆ ನಂ. 46 ರಲ್ಲಿ 2.50 ಎಕರೆ ಸರ್ಕಾರಿ ಜಾಗದಲ್ಲಿ ಶ್ರೀ ಮಧನ್ ಗೋಪಾಲ್ ಎಂಬು ವ್ಯಕ್ತಿಯು ಕಾಂಪೌಂಡ್ ಗೋಡೆಯನ್ನು ನಿರ್ಮಿಸಿದ್ದು, ಸರ್ವೇಯರ್ ರವರನ್ನು ನೇಮಿಸಿ ಸರ್ವೇ ಮಾಡುವಂತೆ ಶ್ರೀ ಸೈಯದ್ ಸಲಾಂ ಮತ್ತುಇತರೆ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಹಾಯಕ ಅಭಿಯಂತರರು ಸರ್ವೇಯರ್ ರವರೊಂದಿಗೆ ಸ್ಥಳವನ್ನು ಪರಿಶೀಲಿಸಿ ಸರ್ವೇ ಮಾಡಿಸುವುದಾಗಿ ಸಹಾಯಕ ಕಂದಾಯ ಅಧಿಕಾರಿಗಳಿಗೆ ತಿಳಿಸಿ ಕ್ರಮ ಕೈಗೊಳ್ಳುವುದಾಗಿ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

- **<u>ಬೆಸ್ಕಾಂ</u>**

1. ವಾರ್ಡ್ ವ್ಯಾಪ್ತಿಯ ಗಾರ್ವೆಭಾವಿಪಾಳ್ಯದ, ಲಕ್ಷ್ಮೀ ಬಡಾವಣೆಯಲ್ಲಿ Under Ground Cable ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಇದುವರೆಗೂ ಕಾಮಗಾರಿಯು ಪೂರ್ಣಗೊಳಿಸಿರುವುದಿಲ್ಲವೆಂದು ಶ್ರೀ ಸುರೇಶ್ ರೆಡ್ಡಿ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಶ್ರೀ ಪುಟ್ಟ ಸ್ವಾಮಿ ಕಿರಿಯ ಅಭಿಯಂತರರು, ಬೆಸ್ಕಾಂ ರವರು 2 ತಿಂಗಳೊಳಗಾಗಿ ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿದ್ದರು.

- **<u>ಪೋಲಿಸ್ ಇಲಾಖೆ</u>**

1. ವಾರ್ಡ್ ವ್ಯಾಪ್ತಿಯ ಐ.ಟಿ.ಐ ಬಡಾವಣೆಯ ಕುವೆಂಪು ಉದ್ಯಾನವನದ ಹತ್ತಿರ ಪೋಲಿಸ್ ಇಲಾಖೆಯಿಂದ ಸಿ.ಸಿ ಕ್ಯಾಮೆರಾ ಅಳವಡಿಸಿದ್ದು, ಸದರಿ ಕ್ಯಾಮರಾವನ್ನು ದುರಸ್ಥಿ ಪಡಿಸುವ ಸಲುವಾಗಿ ಗುತ್ತಿಗೆದಾರರು ತೆಗೆದುಕೊಂಡು ಹೋಗಿದ್ದು, ಇಲ್ಲಿಯವರೆಗೆ ಸಿ.ಸಿ ಕ್ಯಾಮೆರಾ ಅಳವಡಿಸಿರುವುದಿಲ್ಲವೆಂದು ಹಾಗೂ ಸಿ.ಸಿ ಕ್ಯಾಮೆರಾ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲವೆಂದು ಶ್ರೀ ಗೋಪಿನಾಥ ಮತ್ತು ಇತರೆ ಸದಸ್ಯರು ಸಭೆಯಲ್ಲಿ ಆಕ್ಷೇಪಿಸಿದ್ದು, ಈ ಬಗ್ಗ ಸಭೆಯಲ್ಲಿ ಹಾಜರಿದ್ದ ಎಂ. ವೇಂಕಟೇಶ್ ಎ.ಎಸ್.ಐ ರವರು ಒಂದು ತಿಂಗಳೊಳಗಾಗಿ ಬೆಂಗಳೂರು ವ್ಯಾಪ್ತಿಯಲ್ಲಿ ಸಿ.ಸಿ. ಕ್ಯಾಮೆರಾವನ್ನು ಅಳವಡಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದ್ದರು.

2. ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ಬೀಟ್ ವ್ಯವಸ್ಥೆ ಯಾವ ಪ್ರದೇಶದಲ್ಲಿ ವಿಂಗಡಣೆಯಾಗಿರುವ ಬಗ್ಗೆ ಮತ್ತು ಎಷ್ಟು ಹೊಯ್ಸಳ ವಾಹನಗಳನ್ನು ಹಾಗೂ ಎಲ್ಲಿ ಯಾವ ಸಿಬ್ಬಂದಿಗಳು ಬೀಟ್ ಮಾಡಲಾಗುತ್ತಿರುವ ಮಾಹಿತಿಯ ಬಗ್ಗೆ ಶ್ರೀ ಸೈಯದ್ ಸಲಾಂ ಮತ್ತು ಇತರೆ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದ್ದರು.

(5...)

Scanned with

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಂ. ವೆಂಕಟೇಶ್ ಎ.ಎಸ್.ಐ ರವರು 2 ಹೊಯ್ಸಳ ವಾಹನಗಳು ಮೊದಲನೇ ಬೀಟ್ ಮಂಗಮ್ಮಪಾಳ್ಯ, ಕೂಡ್ಲು, ಐ.ಟಿ.ಐ ಬಡಾವಣೆ ಗಳಲ್ಲಿ ಮತ್ತು ಎರಡನೇ ಬೀಟ್ ಹೊಸಪಾಳ್ಯ, ಹರಳುಕುಂಟೆ ಪ್ರದೇಶಗಳಲ್ಲಿ ಮಾಡಲಾಗುತ್ತಿದ್ದು, 3 ತಿಂಗಳಿಗೊಮ್ಮೆ ಪರ್ಯಾಯ ಸಿಬ್ಬಂದಿಗಳನ್ನು ನೇಮಿಸಿ ಬೀಟ್ ಮಾಡಲಾಗುತ್ತಿದೆ. ಹಾಗೂ ಸಿಬ್ಬಂದಿಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದ್ದರು.

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with